# ಕಚ್ಚಾ ಗೇರು ಬೀಜ ಆಮದು ಸುಂಕ ರದ್ದು : ಜೇಟ್ಲಿ ಭರವಸೆ

ಹೆಬ್ರಿ : ಕಚ್ಚಾ ಗೇರುಬೀಜ ಆಮದು ಸುಂಕಿ ರದ್ದುಗೊಳಿಸುವುದಾಗಿ ಗೋಡಂಬಿ ಘಟಕಗಳ ಪದಾಧಿಕಾರಿಗಳ ನಿಯೋಗಕ್ಕೆ ಕೇಂದ್ರ ವಿತ್ತ ಸಚಿವ ಅರುಣ್ ಜೇಟ್ಲಿ ಭರವಸೆ ನೀಡಿದ್ದಾರೆ.

ಈ ಬಾರಿಯ ಬಜೆಟ್‌ನಲ್ಲಿ ಕಚ್ಚಾ ಗೇರುಬೀಜ ಆಮದಿನ ಮೇಲೆ ವಿಧಿಸಿರುವ ಶೇ.9.36 ಸುಂಕ ಹಿಂತೆಗೆದು ಕೊಳ್ಳುವಂತೆ ಕರ್ನಾಟಕ ಸೇರಿದಂತೆ 5 ರಾಜ್ಯಗಳ ಗೋಡಂಬಿ ಘಟಕಗಳ ಪದಾಧಿ ಕಾರಿಗಳು ಗುರುವಾರ ಕೇಂದ್ರ ಹಣ ಕಾಸು ಸಚಿವ ಅರುಣ್ ಜೇಟ್ಲಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರು.

ಗೋಡಂಬಿ ಘಟಕಗಳ ಉತ್ಪಾದನೆ ಸ್ಥಗಿತ, ನಿಲುಗಡೆ, ಪ್ರತಿಭಟನೆ ನಡೆಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ವಿವಿಧ ರಾಜ್ಯಗಳ ಗ್ರಾಮೀಣ ಆತಂಕವಿದೆ. ಹೀಗಿರುವುದರಿಂದ ಪ್ರದೇಶಗಳ ಸುಮಾರು 8 ಲಕ್ಷ ಮಹಿಳಾ ಸರಕಾರ ಈ ಬಗ್ಗೆ ಪುನರ್ ಪರಿಶೀಲನೆ ಕಾರ್ಮಿಕರ ಭವಿಷ್ಯ ಬೀದಿ ಪಾಲಾಗುವ ನಡೆಸಿ ಸುಂಕ ಕೈ ಬಿಡುವಂತೆ ಕೆನರಾ ಸಂಸದ ಅನಂತ ಕುಮಾರ್ ಹೆಗಡೆ, ಉಡುಪಿ ಸಂಸದೆ ಶೋಭಾ ಕರಂದ್ಲಾಜೆ ನಿಯೋಗದೊಂದಿಗೆ ತೆರಳಿ ವಿತ್ತ ಸಚಿವರ ಗಮನ ಸೆಳೆದಿದ್ದರು.

ಕರ್ನಾಟಕ ಕ್ಯಾಶ್ಯೂ ಮ್ಯಾನುಫ್ಯಾಕ್ಚರಿಂಗ್ ಅಸೋಸಿಯೇಶನ್ ಅಧ್ಯಕ್ಷ ರಾಹುಲ್ ಕಾಮತ್, ಕಾರ್‍ಯ ದರ್ಶಿ ತುಕಾರಾಮ ಪ್ರಭು, ಕಲ್ಬಾವಿ ಪ್ರಕಾಶ್ ರಾವ್, ಎಂ. ದಿನೇಶ್ ಪೈ ಸೇರಿದಂತೆ ಕೇರಳ, ತಮಿಳುನಾಡು, ಮಹಾರಾಷ್ಟ್ರ ಮತ್ತು ಒರಿಸ್ಸಾ ರಾಜ್ಯದ ಪ್ರತಿನಿಧಿಗಳೊಂದಿಗೆ ಸಂಸದರಾದ ಬಿ. ಎಸ್ ಯಡಿಯೂರಪ್ಪ, ನಳಿನ್ ಕುಮಾರ್ ಕಟೀಲ್ ನೇತೃತ್ವದಲ್ಲಿ ಕೇಂದ್ರ ಸಚಿವರಾದ ಆನಂತ ಕುಮಾರ್, ಸದಾನಂದ ಗೌಡ ಅವರೊಂದಿಗೆ ಕೇಂದ್ರ ಹಣಕಾಸು ಸಚಿವರಿಗೆ ಗೋಡಂಬಿ ಘಟಕಗಳ ಸಮಸ್ಯೆ ಬಗ್ಗೆ ಮನವರಿಕೆ ಮಾಡಿದ್ದರು.

*ಆಧಾರ : ವಿಜಯ ಕರ್ನಾಟಕ*